## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮಗಳ ಆಯ್ಕೆ ಪಟ್ಟಿಗೆ ಅನುಮೋದನೆ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ಪತ್ರದ ಸಂಖ್ಯೆ:ಜಿಪಂಚಿ/ಅಭಿವೃದ್ಧಿ/ಸುಗ್ರಾಯೋ/05/2012-13, ದಿ:08.10.2012.

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲಿನ ಓದಲಾಗಿದೆ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ 16 ಗ್ರಾಮಗಳು, ಚಿಕ್ಕಬಳ್ಳಾಪುರ ತಾಲ್ಲೂಕಿನ 12 ಗ್ರಾಮಗಳು, ಚಿಂತಾಮಣಿ ತಾಲ್ಲೂಕಿನ 23 ಗ್ರಾಮಗಳು, ಗುಡಿಬಂಡೆ ತಾಲ್ಲೂಕಿನ 07 ಗ್ರಾಮಗಳು, ಶಿಡ್ಲಘಟ್ಟ ತಾಲ್ಲೂಕಿನ 17 ಗ್ರಾಮಗಳು ಮತ್ತು ಗೌರಿಬಿದನೂರು ತಾಲ್ಲೂಕಿನ 10 ಗ್ರಾಮಗಳು **ಒಟ್ಟು 86 ಗ್ರಾಮಗಳನ್ನು** ಆಯ್ಕೆ ಮಾಡಿ ಶಾಸಕರಿಂದ ಶಿಫಾರಸ್ಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಅವರು ಓದಲಾಗಿದೆ(3)ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ 6 **ತಾಲ್ಲೂಕುಗಳ 86 ಗ್ರಾಮಗಳನ್ನು** ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:74:ಸುಗ್ರಾಯೋ:2012. ಬೆಂಗಳೂರು, ದಿನಾಂಕ:08.11.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ 6 **ತಾಲ್ಲೂಕುಗಳ 86 ಗ್ರಾಮಗಳಿಗೆ** ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಚಿಕ್ಕಬಳ್ಳಾಪುರ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಹೆಚ್ಚುವರಿ.

## ಅನುಬಂಧ

ಚಿಕ್ಕಬಳ್ಳಾಪುರ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:74:ಸುಗ್ರಾಯೋ:2012 ದಿ:08.11.2012.

**ಜಿಲ್ಲೆ: ಚಿಕ್ಕಬಳ್ಳಾಪುರ**

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಬಾಗೇಪಲ್ಲಿ | 1 | ಕಾನಗಮಾಕಲಪಲ್ಲಿ | 1049 | 25.81 |
| | | 2 | ನಲ್ಲಪ್ಪರೆಡ್ಡಿಪಲ್ಲಿ | 2155 | 53.03 |
| | | 3 | ಸೋಮನಾಥಪುರ | 1979 | 48.70 |
| | | 4 | ಹೊಸಕೋಟೆ | 1106 | 27.22 |
| | | 5 | ದೇವರಾಜಪಲ್ಲಿ | 680 | 16.73 |
| | | 6 | ಹುದವಾರಪಲ್ಲಿ | 960 | 23.62 |
| | | 7 | ಪುಟ್ಟಭರ್ತಿ | 990 | 24.36 |
| | | 8 | ಬೇಯಿಪಲ್ಲಿ | 609 | 14.99 |
| | | 9 | ಮಲನಾಯಕನಹಳ್ಳಿ | 937 | 23.06 |
| | | 10 | ಪಿಚ್ಚಲವಾರಪಲ್ಲಿ | 554 | 13.63 |
| | | 11 | ಆಚೇಪಲ್ಲಿ | 835 | 20.55 |
| | | 12 | ಕೊತ್ತಕೋಟೆ | 1453 | 35.76 |
| | | 13 | ಗೊರರ್ತಪಲ್ಲಿ | 1887 | 46.44 |
| | | 14 | ಸೋಮಾಕಲಪಲ್ಲಿ | 440 | 10.83 |
| | | 15 | ಕನ್ನಂಪಲ್ಲಿ | 797 | 19.61 |
| | | 16 | ತಿಮ್ಮಂಪಲ್ಲಿ | 1002 | 24.66 |
| | | | **ಒಟ್ಟು** | **17433** | **429.00** |
| 2 | ಚಿಕ್ಕಬಳ್ಳಾಪುರ | 1 | ಅಂಗರೇಖನಹಳ್ಳಿ | 872 | 21.91 |
| | | 2 | ಅವಲಗುರ್ಕಿ | 1909 | 47.97 |
| | | 3 | ದೊಡ್ಡಮರಳಿ | 1516 | 38.10 |
| | | 4 | ದಿಬ್ಬೂರು | 1834 | 46.09 |
| | | 5 | ಹೊಸಹುಡ್ಯ | 2162 | 54.33 |
| | | 6 | ಕೊಂಡೇನಹಳ್ಳಿ | 734 | 18.45 |
| | | 7 | ಕೊಳವನಹಳ್ಳಿ | 1196 | 30.06 |
| | | 8 | ಹಾರೋಬಂಡೆ | 1773 | 44.56 |
| | | 9 | ಗೊಲ್ಲಹಳ್ಳಿ | 461 | 11.59 |
| | | 10 | ದೊಡ್ಡಪ್ಯಾಯಲಗುರ್ಕಿ | 458 | 11.51 |
| | | 11 | ಕುಡುವತಿ | 1605 | 40.33 |
| | | 12 | ಅಣಕನೂರು | 999 | 25.11 |
| | | | **ಒಟ್ಟು** | **15519** | **390.00** |

| | | | | | |
|---|---|---|---|---|---|
| 3 | ಚಿಂತಾಮಣಿ | 1 | ಊಲವಾಡಿ | 1696 | 43.32 |
| | | 2 | ಕುರಟಹಳ್ಳಿ | 1383 | 35.32 |
| | | 3 | ವೈಜಕೂರು | 1363 | 34.81 |
| | | 4 | ಗೋಪಸಂದ್ರ | 703 | 17.95 |
| | | 5 | ಬಿಲ್ಲಾಂಡ್ಲಹಳ್ಳಿ | 1354 | 34.58 |
| | | 6 | ಜೋಡಿಹೊಸಹಳ್ಳಿ | 1298 | 33.15 |
| | | 7 | ಹುಲುಗುಮ್ಮನಹಳ್ಳಿ | 1295 | 33.07 |
| | | 8 | ದೊಡ್ಡಕೊಂಡ್ರಹಳ್ಳಿ | 1215 | 31.03 |
| | | 9 | ಜಂಗಮಸೀಗೆಹಳ್ಳಿ | 1026 | 26.20 |
| | | 10 | ಎಸ್.ರಾಗುಟ್ಟಹಳ್ಳಿ | 1024 | 26.15 |
| | | 11 | ಕರಿಯಪಲ್ಲಿ | 326 | 8.33 |
| | | 12 | ಕೊಡಿಗಲ್ಲು | 927 | 23.68 |
| | | 13 | ನಂದಿಗಾನಹಳ್ಳಿ | 917 | 23.42 |
| | | 14 | ಚನ್ನಕೇಶವಪುರ | 863 | 22.04 |
| | | 15 | ಬೂರುಗಮಾಲಕಲಹಳ್ಳಿ | 816 | 20.84 |
| | | 16 | ಹಿರೇಕಟ್ಟಿಗೇನಹಳ್ಳಿ | 719 | 18.36 |
| | | 17 | ನಿಡಗುರ್ಕಿ | 769 | 19.64 |
| | | 18 | ಅಕ್ಕಿಮಂಗಲ | 768 | 19.61 |
| | | 19 | ಚೊಕ್ಕರೆಡ್ಡಿಹಳ್ಳಿ | 699 | 17.85 |
| | | 20 | ಗಡಿಗವಾರಹಳ್ಳಿ | 1894 | 48.37 |
| | | 21 | ಕಟ್ಟಿಗೇನಹಳ್ಳಿ | 654 | 16.70 |
| | | 22 | ನಂದನವನ | 542 | 13.84 |
| | | 23 | ತುಳುವನೂರು | 850 | 21.71 |
| | | | **ಒಟ್ಟು** | **23101** | **590.00** |
| 4 | ಗುಡಿಬಂಡೆ | 1 | ರೂರಲ್ ಗುಡಿಬಂಡೆ | 499 | 12.29 |
| | | 2 | ಯರ್‍ರಲಕ್ಕೇನಹಳ್ಳಿ | 930 | 22.90 |
| | | 3 | ಬೆಣ್ಣೆಪರ್ತಿ | 652 | 16.05 |
| | | 4 | ದಪ್ಪರ್ತಿ | 809 | 19.92 |
| | | 5 | ತಿರುಮಣಿ | 782 | 19.25 |
| | | 6 | ನಿಲುಗುಂಬ | 674 | 16.59 |
| | | 7 | ಗರುಡಾಚಾರ್ಲಹಳ್ಳಿ | 650 | 16.00 |
| | | | **ಒಟ್ಟು** | **4996** | **123.00** |

| | | | | | |
|---|---|---|---|---|---|
| | | 1 | ಸೀಗೆಹಳ್ಳಿ | 1364 | 34.22 |
| | | 2 | ಹೇಮಾರ್ಲಹಳ್ಳಿ | 1402 | 35.17 |
| | | 3 | ಟಿ.ಕುರುಬರಹಳ್ಳಿ | 903 | 22.65 |
| | | 4 | ಚಿಕ್ಕದಾಸರಹಳ್ಳಿ | 1240 | 31.10 |
| | | 5 | ಪಿಂಡಿಪಾಪನಹಳ್ಳಿ | 740 | 18.56 |
| | | 6 | ಶೆಟ್ಟಿಕೆರೆ | 770 | 19.32 |
| | | 7 | ಬೆಳ್ಳೂಟ್ಟಿ | 1189 | 29.83 |
| | | 8 | ನಡುಪಿನಾಯಕನಹಳ್ಳಿ | 992 | 24.88 |
| 5 | ಶಿಡ್ಲಘಟ್ಟ | 9 | ಕನ್ನಮಂಗಲ | 941 | 23.60 |
| | | 10 | ಗೊರಮಡಗು | 980 | 24.58 |
| | | 11 | ಸೊಣ್ಣೇನಹಳ್ಳಿ | 867 | 21.75 |
| | | 12 | ನಾಗಮಂಗಲ | 1277 | 32.03 |
| | | 13 | ದೊಡ್ಡದಾಸರಹಳ್ಳಿ | 633 | 15.88 |
| | | 14 | ಅಪೇಗೌಡನಹಳ್ಳಿ | 1014 | 25.44 |
| | | 15 | ದಬ್ಬರಗಾನಹಳ್ಳಿ | 498 | 12.49 |
| | | 16 | ಮುತ್ತೂರು | 1477 | 37.05 |
| | | 17 | ಅಬ್ಲೂಡು | 1174 | 29.45 |
| | | | **ಒಟ್ಟು** | **17461** | **438.00** |
| | | 1 | ಮೇಳ್ಯ | 2956 | 72.34 |
| | | 2 | ಇಡಗೂರು | 4763 | 116.56 |
| | | 3 | ಕಾದಲವೇಣಿ | 2560 | 62.65 |
| | | 4 | ಗೆದರೆ | 1519 | 37.17 |
| | | 5 | ಕಡಬೂರು | 2281 | 55.82 |
| 6 | ಗೌರಿಬಿದನೂರು | 6 | ಅಲಕಾಪುರ | 2886 | 70.62 |
| | | 7 | ಹೊಸೂರು | 6496 | 158.97 |
| | | 8 | ಕಲ್ಲಿನಾಯಕನಹಳ್ಳಿ | 1848 | 45.22 |
| | | 9 | ಪುರ | 1193 | 29.19 |
| | | 10 | ಚಂದನದೂರು | 1694 | 41.45 |
| | | | **ಒಟ್ಟು** | **28196** | **690.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **106706** | **2660.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ